ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

29

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 11-12-2020

# ಧನ ವಿನಿಯೋಗ ವಿಧೇಯಕಕ್ಕೆ ಅಸ್ತು

ವಿಧಾನ ಪರಿಷತ್: ರಾಜ್ಯ ಬಜೆಟ್‌ಗೆ ಹೆಚ್ಚುವರಿಯಾಗಿ 3,320 ಕೋಟಿ ರೂ.ಗಳ ಪೂರಕ ಬಜೆಟ್‌ಗೆ ವಿಧಾನ ಪರಿಷತ್ ಗುರುವಾರ ಅಂಗೀಕಾರ ನೀಡಿದೆ.

ವಿಧಾನಸಭೆಯಲ್ಲಿ ಅಂಗೀಕಾರಗೊಂಡ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪರವಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಂಡಿಸಿದರು. ನಂತರ ಮಾತನಾಡಿ, ಕೊರೊನಾ ನಿಯಂತ್ರಣಕ್ಕಾಗಿ 205 ಕೋಟಿ ರೂ., ಕೈಗಾರಿಕೆಗಳಿಗೆ ತೆರಿಗೆ ವಿನಾಯಿತಿಗಾಗಿ 350 ಕೋಟಿ ರೂ., ಸಾರಿಗೆ ನಿಗಮಗಳ ನೌಕರರ ವೇತನಕ್ಕಾಗಿ 168.75 ಕೋಟಿ ರೂ., ಲಾಕ್‌ಡೌನ್ ಅವಧಿಯಲ್ಲಿ 5ಕೆ.ಜಿ. ಹೆಚ್ಚುವರಿ ಅಕ್ಕಿ ನೀಡಲು 711.62 ಕೋಟಿ ರೂ., ವೈದ್ಯಕೀಯ ಕಾಲೇಜುಗಳ ವೇತನ ಹಾಗೂ ಇತರೆ ವೆಚ್ಚಗಳಿಗೆ 108.77 ಕೋಟಿ ರೂ. ಸೇರಿ 3,320 ಕೋಟಿ ರೂ.ಗಳ ಪೂರಕ ಅಂದಾಜಿಗೆ ಅನುಮತಿ ನೀಡಬೇಕೆಂದು ಮನವಿ ಮಾಡಿದರು. ಸುದೀರ್ಘ ಚರ್ಚೆಯ ನಂತರ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷದ ಸದಸ್ಯರು ಒಮ್ಮತದಿಂದ ಅನುಮೋದಿಸಿದರು.

ವಿಧೇಯಕ ಕುರಿತು ಮಾತನಾಡಿದ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ್, ಜಿಎಸ್‌ಟಿ ಬಾಕಿ ಸೇರಿ ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನಗಳು ಸರಿಯಾಗಿ ಬರುತ್ತಿಲ್ಲ, ಕೇಂದ್ರದಿಂದ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಅನುಸರಿಸಲಾಗುತ್ತಿದೆ. ಹಾಗೆಯೇ ರಾಜ್ಯದಲ್ಲೂ ವಿಷಮ ಪರಿಸ್ಥಿತಿಯಿದ್ದರೂ, ದುಂದು ವೆಚ್ಚಕ್ಕೆ ಕಡಿವಾಣ ಬಿದ್ದಿಲ್ಲ, ಭ್ರಷ್ಟಾಚಾರ ನಿಯಂತ್ರಣ ಸಾಧ್ಯವಾಗಿಲ್ಲ, ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಪರಿಸ್ಥಿತಿಯಲ್ಲಿ ಹೊಸ ನಿಗಮ ಮಂಡಳಿಗಳ ರಚನೆಯ ಅಗತ್ಯವೇನಿತ್ತು? ನಿಗಮ ಮಂಡಳಿಗಳ ಮೂಲಕ ರಾಜಕೀಯ ಪುನರ್ ವಸತಿ ಕಲ್ಪಿಸುವ ಕಾರ್ಯ ಆಗುತ್ತಿದೆ ಎಂದರು.

ಸಚಿವ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿ, ಕೇಂದ್ರದಿಂದ ತೆರಿಗೆ ಪಾಲಿನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಯಾವುದೇ ಅನ್ಯಾಯ ಅಥವಾ ತಾರತಮ್ಯವಾಗಿಲ್ಲ, ಜಿಎಸ್‌ಟಿ ಪಾಲು ಹಂತ ಹಂತವಾಗಿ ರಾಜ್ಯಕ್ಕೆ ಬರಲಿದೆ. ಕೊರೊನಾ ಕಾರಣದಿಂದ ಎಲ್ಲ ರಾಜ್ಯಗಳ ಆದಾಯವೂ ಕಡಿಮೆಯಾಗಿದೆ. ಹಾಗೆಯೇ ಕೇಂದ್ರದಲ್ಲೂ ಆದಾಯ ಕೊರತೆ ಉಂಟಾಗಿದೆ. ಈ ಹಿನ್ನಲೆಯಲ್ಲಿ ತೆರಿಗೆ ಪಾಲು ಸರಿಯಾಗಿ ಸಿಕ್ಕಿಲ್ಲ. ಆದರೆ, ಜಿಎಸ್‌ಟಿ ನಷ್ಟದ ಬದಲು ಆರ್‌ಬಿಐನಿಂದ 12 ಸಾವಿರ ಕೋಟಿ ರೂ. ಸಾಲಪಡೆಯಲು ಅವಕಾಶ ನೀಡಲಾಗಿದೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಯಾವುದೇ ನಷ್ಟ ಆಗುವುದಿಲ್ಲ ಎಂದು ಹೇಳಿದರು.

> **ರಾಜ್ಯದ ಆರ್ಥಿಕ ಸ್ಥಿತಿ ಸರಿಯಿಲ್ಲದೇ ಇದ್ದರೂ, ವಿನಾಕಾರಣ ನಿಗಮಗಳ ರಚನೆ ಅವಶ್ಯಕತೆ ಏನಿತ್ತು? ನೂರು, ಇನ್ನೂರು ಅಥವಾ ಮುಂದೆ ಸಾವಿರ ನಿಗಮ ರಚಿಸಿದರೂ ನಮ್ಮದೇನೂ ತಕರಾರಿಲ್ಲ. ಎಲ್ಲವನ್ನೂ ನೀವೇ ಅನುಭವಿಸುತ್ತೀರಿ.**
> **• ಮರಿತಿಬ್ಬೇಗೌಡ, ಜೆಡಿಎಸ್ ಸದಸ್ಯ**

ಈ ವರ್ಷ ಭೀಮಾ ನದಿಯಿಂದ ಆದ ಪ್ರವಾಹದಿಂದ ಸಾವು ಪಾಠ ಕಲಿಯುವುದು ಸಾಕಷ್ಟಿದೆ. ಪ್ರವಾಹ ತಡೆಗೆ ಅಣೆಕಟ್ಟುಗಳಿಗೆ ನೀರು ಹೆಚ್ಚಾದಾಗ ಅಥವಾ ಕಡಿಮೆಯಾದಾಗ ಎದುರಾಗುವ ಸನ್ನಿವೇಶಗಳನ್ನು ವೈಜ್ಞಾನಿಕವಾಗಿ ನಿಭಾಯಿಸುವ ಅವಶ್ಯಕತೆಯಿದೆ. ಆ ವ್ಯವಸ್ಥೆ ಜಾರಿಗೆ ತರಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಜೆಡಿಎಸ್ ಸದಸ್ಯ ಬಸವರಾಜ ಹೊರಟ್ಟಿ ಮಾತನಾಡಿ, ಬಿಜೆಪಿಯವರು ಸರ್ಕಾರ ಮಾಡಿ ಇಲ್ಲದ ಉಸಾಬರಿ ಮೈಮೇಲೆ ಎಳೆದುಕೊಂಡಿದ್ದಾರೆ. ಆರ್ಥಿಕ ಸಂಕಷ್ಟವಿರುವಾಗಲೇ ನಿಗಮ ಮಂಡಳಿಗಳ ನೇಮಕಾತಿ ಮಾಡಲಾಗುತ್ತಿದೆ. ಅದರ ಜತೆಗೆ ಹೊಸ ನಿಗಮ ರಚಿಸಲಾಗುತ್ತಿದೆ. ಇದರ ಅವಶ್ಯಕತೆಯೇನಿತ್ತು? ಇನ್ನಾದರೂ ನಿಗಮಗಳ ಸ್ಥಾಪನೆ ಮಾಡಬೇಡಿ ಎಂದರು.